<u>ಸಾಕ್ಷಿಯನ್ನು ದಿನಾಂಕ 07-10-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಎಲ್.ಹೆಚ್. ವಕೀಲರಿಂದಃ</u>

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭಾಸ ಮಾಡಿದ್ದೇನೆ. ನನಗೆ ಇಂಗ್ಲೀಷ ಭಾಷೆ ಓದಲು-ಬರೆಯಲು ಬರುತ್ತದೆ.

2 ನೇ ಪ್ರತಿವಾದಿಯನ್ನು ಯಾವ ಊರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಆಕೆಯ ಗಂಡನನ್ನು ಮನೆ ಅಳಿಯನನ್ನಾಗಿ ಮಾಡಿಕೊಳ್ಳಲಾಗಿದೆ ಎನ್ನುತ್ತಾರೆ. 2 ನೇ ಪ್ರತಿವಾದಿಗೆ ಮದುವೆಯಾಗಿ 30 ರಿಂದ 35 ವರ್ಷ ಆಯಿತು. 2 ನೇ ಪ್ರತಿವಾದಿ ಗಂಡನನ್ನು ಮನೆ ಅಳಿಯನನ್ನಾಗಿ ಇಟ್ಟುಕೊಂಡ ಸಂಬಂಧ ಆಕೆಯ ತಂದೆ ದಾಖಲೆ ಬರೆದುಕೊಟ್ಟಿದ್ದಾನೆ. ಸದರಿ ದಾಖಲೆಯನ್ನು 2 ನೇ ಪ್ರತಿವಾದಿಯ ತಂದೆ ಆತನ ಕುಲಬಾಂಧವರ ಸಮಕ್ಷಮದಲ್ಲಿ ಬರೆದುಕೊಟ್ಟಿದ್ದ. ಸದರಿ ಕುಲಬಾಂಧವರ ಹೆಸರ ನನಗೆ ಗೊತ್ತಿಲ್ಲ. ಸದರಿ ದಾಖಲೆ ಬರೆಯುವ ಕಾಲಕ್ಕೆ ವಾದಿ ಮತ್ತು 1 ನೇ ಪ್ರತಿವಾದಿ ಇರಲಿಲ್ಲ. ಸದರಿ ದಾಖಲೆಗೆ ನಾನು ಸಹಿ ಮಾಡಿದ್ದೇನೆ. ಸದರಿ ದಾಖಲೆಯನ್ನು ಛಾಪಾ ಕಾಗದದ ಮೇಲೆ ಬರೆದಿದ್ದಾರೆ.

2 ನೇ ಪ್ರತಿವಾದಿಯ ಮಗನಿಗೆ 1 ನೇ ಪ್ರತಿವಾದಿಯ ಮೊಮ್ಮಗನನ್ನು ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ವಾದಿಯನ್ನು ಚಿತ್ರಸಾಲ ಗ್ರಾಮದ ಸಮೀಪವೇ ಇರುವ ನಿಡಗುಂದಾ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ವಾದಿ ಚಿತ್ರಸಾಲ ಗ್ರಾಮದಲ್ಲಿರುವ ತನ್ನ ತಂದೆ ಮನೆಗೆ ಆಗಾಗ ಬಂದು ಹೋಗುತ್ತಾಳೆ ಎಂದರೆ ಸರಿ. ಇಮಾಮ್ ಸಾಬನಿಗೆ ಎಷ್ಟು ಕೊಣೆ ಇರುವ ಮನೆ ಇತ್ತು ಎಂದರೆ ಸಾಕ್ಷಿ ಒಂದು ಮನೆ ಮತ್ತು ಗುಡಿಸಲು ಇತ್ತು ಎನ್ನುತ್ತಾರೆ. ತನ್ನ ಮನೆಯಲ್ಲಿ ಒಂದು ಕೋಣೆಯನ್ನು ಇಮಾಮ್ ಸಾಬ ವಾದಿಗೆ ಕೊಟ್ಟಿದ್ದ ಮತ್ತು ಆಕೆ ತನ್ನ ತಂದೆ ಮನೆಗೆ ಬಂದಾಗ ಅದೇ ಕೋಣೆಯಲ್ಲಿ ಉಳುದುಕೊಳ್ಳುತ್ತಿದ್ದಳು ಎನ್ನುವುದು ಸರಿಯಲ್ಲ.

ನನ್ನ ಮನೆ ಇಮಾಮ್ ಸಾಬನ ಮನೆಯಿಂದ 60-70 ಮೀಟರ್ ದೂರದಲ್ಲಿದೆ. ಆತನ ಮನೆಯಲ್ಲಿ ಏನು ನಡೆಯುತ್ತದೆ ಎಂದು ನನ್ನ ಮನೆಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ವಕೀಲರು ಬರೆಸಿರುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಇಮಾಮ್ ಸಾಬ ಆಸ್ತಿ ಕೊಟ್ಟ ಬಗ್ಗೆ ಬರೆದಿದ್ದಾರೆ ಎನ್ನುತ್ತಾರೆ.

ನಿಡಿ-1 ರ ಮೃತ್ಯು ಪತ್ರವನ್ನು ಚಿಂಚೋಳಿ ತಹಸಿಲ್ದಾರ ಕಚೇರಿ ಬಳಿ ಟೈಪ್ ಮಾಡಿಸಲಾಗಿತ್ತು. ನಿಡಿ-1 ರ ದಾಖಲೆಯನ್ನು ನನಗೆ ಓದಿ ಹೇಳಿದ್ದಾರೆ. ನಿಡಿ-1 ರ ದಾಖಲೆಯನ್ನು ಬರೆಯಲು ಛಾಪಾ ಕಾಗದವನ್ನು ಯಾರು ಖರೀದಿ ಮಾಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ 2 ನೇ ಪ್ರತಿವಾದಿ ಗಂಡ ಮುಸ್ತಾಫಾ ಖರೀದಿ ಮಾಡಿದ್ದ ಎನ್ನುತ್ತಾರೆ. ಸದರಿ ಛಾಪಾ ಕಾಗದವನ್ನು ಯಾವ ದಿನಾಂಕದಂದು ಖರೀದಿ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಛಾಪಾ ಕಾಗದ ತಂದ ಎಷ್ಟು ದಿನಗಳ ನಂತರ ನಿಡಿ-1 ರ ದಾಖಲೆಯನ್ನು ಅದರಲ್ಲಿ ಬರೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನಿಡಿ-1 ರ ದಾಖಲೆಯನ್ನು ಇಮಾಮ್ ಸಾಬ ಬರೆಸಿಲ್ಲ ಬದಲಾಗಿ ಸದರಿ ದಾಖಲೆಯನ್ನು ಪ್ರತಿವಾದಿಯರು ಸೃಷ್ಠಿ ಮಾಡಿದ್ದು ನಾನು ಅವರೊಂದಿಗೆ ಷರೀಕಾಗಿ ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಡಿ-1 ರ ದಾಖಲೆಯನ್ನು ಸೃಷ್ಠಿ ಮಾಡಲಾದ ಸಮಯದಲ್ಲಿ ಇಮಾಮ್ ಸಾಬನಿಗೆ ವಯಸ್ಸಾಗಿತ್ತು, ಆತನಿಗೆ ನಡೆದಾಡಲು ಸಾಧ್ಯವಿರಲಿಲ್ಲ ಹಾಗಾಗಿ ಆತ ಚಿಂಚೋಳಿಗೆ ಬಂದಿರಲಿಲ್ಲ ಎನ್ನುವುದು ಸರಿಯಲ್ಲ.

ಇಮಾಮ್ ಸಾಬ ಅನಾರೋಗ್ಯದಿಂದ ಮೃತಪಟ್ಟಿರುತ್ತಾನೆ. ಆತನಿಗೆ ಯಾವ ಕಾಯಿಲೆ ಇತ್ತು ಎಂದು ನನಗೆ ಗೊತ್ತಿಲ್ಲ. ವಾದಿ ಇಮಾಮ್ ಸಾಬನ ಪಾಲನೆ ಪೋಷಣೆ ಮಾಡುತ್ತಿದ್ದಳು ಎನ್ನುವುದು ಸರಿಯಲ್ಲ. ವಾದಿ ಇಮಾಮ್ ಸಾಬನ ಮನೆಗೆ ಬಂದು ಆತನನ್ನು ಮಾತಾನಾಡಿಸಿಕೊಂಡು ಹೋಗುತ್ತಿದ್ದಳು ಎಂದರೆ ಸರಿ. ಇಮಾಮ್ ಸಾಬ ಬದುಕಿದ್ದಾಗ ದಾವಾ ಸ್ವತ್ತುಗಳಲ್ಲಿ ಬರುವ ಉತ್ಪನ್ನಗಳನ್ನು ಆತ ತನ್ನ ಮೂರು ಜನ ಮಕ್ಕಳಿಗೆ ಹಂಚುತಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಇಮಾಮ್ ಸಾಬ ಮತ್ತು ಆತನ ಕುಟುಂಬದ ವ್ಯವಹಾರದ ಬಗ್ಗೆ ನನಗೇನು ಗೊತ್ತಿಲ್ಲದಿದ್ದರು ಸಹ ಪ್ರತಿವಾದಿಯರ ಮಾತು ಕೇಳಿ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎನ್ನುವುದು ಸರಿಯಲ್ಲ.

ಇಮಾಮ್ ಸಾಬ ನಿಡಿ-1 ರ ದಾಖಲೆ ಬರೆಸುವ ಸಲುವಾಗಿ ಚಿಂಚೋಳಿಗೆ ಯಾವತ್ತು ಬಂದಿಲ್ಲ ಬದಲಾಗಿ ಪ್ರತಿವಾದಿಯರು ಮತ್ತು ನಾನು ಮನೆಯಲ್ಲೆ ಇಮಾಮ್ ಸಾಬನ ಹೆಬ್ಬೆಟ್ಟಿನ ಗುರುತನ್ನು ನಿಡಿ-1 ರ ದಾಖಲೆ ಮೇಲೆ ಪಡೆದು ಸದರಿ ದಾಖಲೆಯನ್ನು ಸೃಷ್ಠಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ವಾದಿಗೆ ದಕ್ಕಬೇಕಾದ ದಾವಾ ಸ್ವತ್ತುಗಳನ್ನು ಲಪಾಟಿಸುವ ಉದ್ದೇಶದಿಂದ ನಿಡಿ-1 ರ ದಾಖಲೆಯನ್ನು ಪ್ರತಿವಾದಿಯರು ಸೃಷ್ಠಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ವಾದಿಗೆ ಪಾಲು ಕೊಡಬಾರದು ಎಂಬ ದುರುದ್ದೇಶದಿಂದ ಪ್ರತಿವಾದಿಯರು ನಿಡಿ-1 ರ ದಾಖಲೆಯನ್ನು ಸೃಷ್ಠಿ ಮಾಡಿದ್ದು ಅವರ ಮಾತು ಕೇಳಿಕೊಂಡು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**